ಮಕ್ಕಳಿಗೆ ಕಠೋರವಾದ ಸತ್ಯಗಳನ್ನು ಹೇಳುವುದಕ್ಕೆ ಈ ಬಗೆಯ ರೂಪಕಮಾರ್ಗ ಅತ್ಯುಚಿತವೆಂದು ನಾನು ಭಾವಿಸುತ್ತೇನೆ. ನಮ್ಮ ಜವಾಬುದಾರಿ – ಮಕ್ಕಳಿಗೆ ಹೂವಿನ ಅರಿವು ಕೊಡುವಂತೆಯೇ ಹೂವಿನ ಹಿಂದಿರುವ ಮುಳ್ಳಿನ ಅರಿವನ್ನೂ ಮರೆಮಾತಿನ ತಂತ್ರದ ಮೂಲಕ ದಾಟಿಸಿ ಬಿಡುವುದು. ಸಂತೋಷದಂತೆ ಸ್ಥೈರ್ಯವೂ ಮಕ್ಕಳಿಗೆ ಉಪಾಧೇಯವಾದುದು. ಮಕ್ಕಳ ಸಾಹಿತ್ಯದಲ್ಲಿ ಇದಕ್ಕೆ ಅನೇಕ ಮಾಯಾಮಾರ್ಗಗಳಿವೆ. ಅದನ್ನು ಜವಾಬುದಾರಿಯೊಂದಿಗೆ ಅನುಸಂಧಾನಿಸುವುದು ಪಕ್ವಗೊಂಡ ಮಾಗಿದಮನಸ್ಸಿನ ಮಕ್ಕಳ ಸಾಹಿತಿಗಳ ಹೊಣೆಗಾರಿಕೆ!

## ಮರೆಯಬಾರದ ಕೆಲವು ಮಕ್ಕಳ ಕವಿತೆಗಳು

## ಉದಯ ರಾಗ: ಪಂಜೆ ಮಂಗೇಶರಾವ್

ಮೂಡುವನು ರವಿ ಮೂಡುವನು; ಕತ್ತಲೊಡನೆ ಜಗಳಾಡುವನು
ಮೂಡಣ ರಂಗಸ್ಥಳದಲಿ ನೆತ್ತರು ಮಾಡುವನು, ಕುಣಿದಾಡುವನು.

ಬೆಳಕಿನ ಕಣ್ಣುಗಳಿಂದಾ ಸೂರ್ಯನು ನೋಡುವನು, ಬಿಸಿಲೂಡುವನು;
ಚಿಳಿಪಿಳಿ ಹಾಡನು ಹಾಡಿಸಿ, ಹಕ್ಕಿಯ ಗೂಡಿನ ಹೊರಹೊರ ದೂಡುವನು.

ಬಂಗಾರದ ಚೆಲು ಬಿಸಿಲ ಕಿರೀಟದ ಶೃಂಗಾರದ ತಲೆ ಎತ್ತುವನು;
ತೆಂಗಿನ ಕಂಗಿನ ತಾಳೆಯ ಬಾಳೆಯ ಅಂಗಕೆ ರಂಗನು ಮೆತ್ತುವನು.

ಮಾಡಿನ ಹುಲ್ಲಲಿ ಚಿನ್ನದ ಗೆರೆಯನು ಎಳೆಯುವನು ರವಿ ಹೊಳೆಯುವನು;
ಕೂಡಲೆ ಕೋಣೆಯ ಕತ್ತಲ ಕೊಳೆಯನು ತೊಳೆಯುವನು ರವಿ ಹೊಳೆಯುವನು.

ಮಲಗಿದ ಕೂಸಿನ ನಿದ್ದೆಯ ಕಸವನು ಗುಡಿಸುವನು, ಕಣ್ ಬಿಡಿಸುವನು;
ಹುಲು, ಗಿಡ, ಹೂವಿಗೆ ಪರಿಪರಿ ಬಣ್ಣವ ಉಡಿಸುವನು, ಹನಿ ತೊಡಿಸುವನು.

ಏರುವನು ರವಿ ಏರುವನು; ಬಾನೊಳು ಸಣ್ಣಗೆ ತೋರುವನು;
''ಏರಿದವನು ಚಿಕ್ಕವನಿರಬೇಕಲೆ'' ಎಂಬಾ ಮಾತನು ಸಾರುವನು.

ಈ ಪದ್ಯವು ಪಂಜೆಯವರ ಮಕ್ಕಳ ಕವಿತೆಗಳ ಗುಣವನ್ನು ಸಾರವತ್ತಾಗಿ ಪ್ರಕಟಿಸುತ್ತಾ ಇದೆ. ಮೊದಲಿಗೆ ನಾವು ಗಮನಿಸಬೇಕಾದದ್ದು ಮಕ್ಕಳಿಗೆ ಬಹು ಪ್ರಿಯವಾಗುವ ಕುಣಿದಾಡುವ ಪ್ರಾಸಗಳನ್ನು. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಇದನ್ನು ಪಠ್ಯದಲ್ಲಿ ಓದಿದ್ದು. ಈಗಲೂ ಈ ಕವಿತೆಯ ಸಾಲುಗಳು ನನ್ನ ಮನಸ್ಸಲ್ಲಿ ಉಳಿದಿವೆ.

'ತೆಂಗಿನ ಕಂಗಿನ ತಾಳೆಯ ಬಾಳೆಯ ಅಂಗಕೆ ರಂಗನು ಮೆತ್ತುವನು' ಎಂಬ ಸಾಲು ನನ್ನ ಮನೋರಂಗದಲ್ಲಿ ನೆನೆದಾಗೆಲ್ಲಾ ನರ್ತಿಸುತ್ತಾ ಇರುತ್ತದೆ. ಓತಪ್ರೋತವಾಗಿ ಬರುವ ಅನುಪ್ರಾಸಗಳ ಹೆಣಿಗೆ ಮಕ್ಕಳಿಗೆ ಯಾವತ್ತೂ ಪ್ರಿಯವಾಗುವಂಥದ್ದು. ಒಂದೇ ಬಗೆಯಲ್ಲಿ ಅನುರಣಿಸುವ